

بسم اللهِ الرّحمٰنِ الرّحيم

# ಯು.ಕೆ. ಜಲ್ಸ ಸಾಲಾನ 2014: ಅತಿಥಿ ಸೇವೆ ಮಾಡಲು ತಮ್ಮನ್ನು ಅರ್ಪಿಸುವವರು ಅದೃಷ್ಟಶಾಲಿಗಳೂ ಅಲ್ಲಾಹನ ಸಂಪ್ರೀತಿ ಗಳಿಸುವವರೂ ಆಗಿರುತ್ತಾರೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **22-08-14** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:

ಅಲ್ಲಾಹನ ಅನುಗ್ರಹದಿಂದ ಮುಂದಿನ ಶುಕ್ರವಾರ ಬ್ರಿಟನಿನ ಅಹ್ಮದಿಯಾ ಜಮಾಅತಿನ ಜಲ್ಸ ಸಾಲಾನ ಪ್ರಾರಂಭವಾಗುವುದು. ಜಲ್ಸದ ಸಿದ್ಧತೆಗಳು ಈಗಾಗಲೇ ಬಹಳ ಮಟ್ಟಿಗೆ ಪೂರ್ಣಗೊಂಡಿವೆ. ಅತಿಥಿಗಳು ಆಗಮಿಸಲು ಪ್ರಾರಂಭಿಸಿದ್ದಾರೆ. ಜಲ್ಸದ ಅನುಗ್ರಹಗಳನ್ನು ಗಳಿಸಲು ಪ್ರಯಾಣ ಹೊರಟ ಅತಿಥಿಗಳನ್ನು, ಇಲ್ಲಿಗೆ ಆಗಮಿಸಿದ ಅತಿಥಿಗಳನ್ನು ಮತ್ತು ಇನ್ನು ಮುಂದೆ ಆಗಮಿಸುವ ಅತಿಥಿಗಳನ್ನು ಎಲ್ಲರನ್ನೂ ಅಲ್ಲಾಹನು ಸಂರಕ್ಷಿಸಲಿ. ಅಹ್ಮದಿಯರಿಗೆ ಮಾತ್ರವಲ್ಲ ಲೋಕದ ಪ್ರತಿಯೊಬ್ಬ ವ್ಯಕ್ತಿಗೆ ಅಲ್ಲಾಹನು ಶಾಂತಿ ಮತ್ತು ನೆಮ್ಮದಿ ಲಭಿಸುವಂತೆ ಮಾಡಲಿ. ಈ ಕಾಲಘಟ್ಟದಲ್ಲಿ ಇದಕ್ಕೋಸ್ಕರವೇ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿರುವನು.

ನಮಗೆಲ್ಲರಿಗೂ ತಿಳಿದಿರುವಂತೆ ನಮ್ಮ ಜಲ್ಸದ ಎಲ್ಲಾ ವ್ಯವಸ್ಥೆಗಳು ಸ್ವಯಂಸೇವಕರ ಸೇವೆಯ ಮನೋಭಾವದಿಂದ ಈಡೇರುತ್ತವೆ. ಜಲ್ಸ ಪ್ರಾರಂಭವಾಗುವ ಒಂದು ವಾರದ ಮೊದಲು ನಾನು ಜಲ್ಸದ ಕಾರ್ಯಕರ್ತರಿಗೆ ಅವರ ಹೊಣೆಗಾರಿಕೆಗಳ ಬಗ್ಗೆ ಉಪದೇಶಿಸುವ ವಾಡಿಕೆಯಿದೆ. ಈ ದಿನ ಇದರ ಬಗ್ಗೆಯೇ ಕೆಲವು ಮಾತುಗಳನ್ನು ಹೇಳುತ್ತೇನೆ. ಜಲ್ಸ ಸಾಲಾನಕ್ಕೆ ಆಗಮಿಸುವ ಅತಿಥಿಗಳ ಬಗ್ಗೆ ನಾನು ಪ್ರಸ್ತಾಪಿಸುವ ವಿಷಯ ಸಹ ಜಲ್ಸಕ್ಕೆ ಸಂಬಂಧಿಸಿದ ವಿಷಯವೇ ಆಗಿರುತ್ತದೆ. ಜಲ್ಸಕ್ಕೆ ಆಗಮಿಸುವ ಅತಿಥಿಗಳು ಧಾರ್ಮಿಕ ಉದ್ದೇಶಕ್ಕಾಗಿ ಮಾತ್ರ ಆಗಮಿಸುತ್ತಾರೆ. ಜಲ್ಸಕ್ಕೆ ಬಂದು ಸೇರುವವರ ಆಗಮನದ ಉದ್ದೇಶ ಇದು ಮಾತ್ರವೇ ಆಗಿರಬೇಕು. ಇಲ್ಲಿಗೆ ಆಗಮಿಸುವ ಅತಿಥಿ ಈ ಉದ್ದೇಶದಿಂದ ಆಗಮಿಸುವುದಾದರೆ ಆ ಅತಿಥಿಯ ಮಹತ್ವ ಅನೇಕ ಪಟ್ಟು ವರ್ಧಿಸುತ್ತದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಲ್ಸಕ್ಕೆ ಆಗಮಿಸುವ ಬಗ್ಗೆ ವಿಶಿಷ್ಟವಾಗಿ ಒತ್ತಿ ಹೇಳಿದ್ದಾರೆ. ಜಲ್ಸಕ್ಕೆ ಆಗಮಿಸುವ ಉದ್ದೇಶ ಕೇವಲ ಧಾರ್ಮಿಕ ಉನ್ನತಿ ಗಳಿಸುವುದು ಮಾತ್ರವೆಂದು ಹೇಳಿದ್ದಾರೆ. ಅಲ್ಲಾಹನ ಅನುಗ್ರಹ ಗಳಿಸಲು ಜಲ್ಸ ಒಂದು ಮಾರ್ಗವಾಗಿದೆ ಎಂದು ಸಹ ಹೇಳಿದ್ದಾರೆ. ಈ ಕಾರಣಗಳಿಂದ ಜಲ್ಸದ ಮಹತ್ವ ಬಹಳ ಹೆಚ್ಚಾಗಿದೆ. ಇಲ್ಲಿಗೆ ಆಗಮಿಸುವವರು ಲೌಕಿಕ ಲಾಭಕ್ಕೋಸ್ಕರ ಬರುವುದಿಲ್ಲ. ಅವರು ಲೌಕಿಕವಾದ ಸಮಾರಂಭದಲ್ಲಿ ಭಾಗವಹಿಸುವ ಉದ್ದೇಶದಿಂದ ಬರುವುದಲ್ಲ. ಆದರೆ ಯಾರಾದರೂ ಈ ಉದ್ದೇಶಕ್ಕೋಸ್ಕರ ಬರುವುದಾದರೆ ಅವನು ತನಗೆ ಲಭಿಸಬಹುದಾದ ಅನುಗ್ರಹವನ್ನು ಕಳೆದುಕೊಳ್ಳುತ್ತಾನೆ. ಇಲ್ಲಿಗೆ ಆಗಮಿಸುವ ಅತಿಥಿಗಳಿಗೆ ಸೇವೆ ಸಲ್ಲಿಸಲು ವಿವಿಧ ವಿಭಾಗಗಳಲ್ಲಿ ನಿಸ್ವಾರ್ಥಿಗಳಾದ ಸ್ವಯಂಸೇವಕರು ಕೆಲಸಮಾಡುತ್ತಾರೆ. ಇಲ್ಲಿಗೆ ಆಗಮಿಸುವ ಅತಿಥಿಗಳು ಸಾಮಾನ್ಯ ಅತಿಥಿಗಳಲ್ಲ. ಅವರು ಈ ಕಾಲಘಟ್ಟದ ಇಮಾಮರು ಸ್ಥಾಪಿಸಿದ ಆಡಳಿತೆಯ ವ್ಯವಸ್ಥೆಯ ಕರೆಗೆ ಓಗೊಟ್ಟು ಅಲ್ಲಾಹನ ಸಂಪ್ರೀತಿ ಗಳಿಸಲಿಕ್ಕೋಸ್ಕರ ಆಗಮಿಸುವ ಅತಿಥಿಗಳಾಗಿದ್ದಾರೆ.

ಕೆಲವರು ಬಹಳ ಹೆಚ್ಚು ಖರ್ಚು ವೆಚ್ಚ ಸಹಿಸಿ ಇಲ್ಲಿಗೆ ಬರುತ್ತಾರೆ. ಕೆಲವರು ತಮ್ಮ ಸಾಮರ್ಥ್ಯಕ್ಕಿಂತ ಹೆಚ್ಚು ಖರ್ಚು ಮಾಡಿ ಇಲ್ಲಿಗೆ ಆಗಮಿಸುತ್ತಾರೆ. ಬಹಳ ದೂರ ದೂರ ಸ್ಥಳಗಳಿಂದ ಆಗಮಿಸುತ್ತಾರೆ. ಈ ಪ್ರಯಾಣ ಎಲ್ಲಾ ರೀತಿಗಳಲ್ಲೂ ಅನುಗ್ರಹದಾಯಕವಾಗಲಿ ಎಂದು ಅವರು ಆಶಿಸುತ್ತಾರೆ. ಖಿಲಾಫತ್‌ನೊಂದಿಗೆ ಅವರಿಗಿರುವ ಪ್ರೀತಿಯ ಕಾರಣ ಆಯಾಕಾಲದ ಖಲೀಫರನ್ನು ಭೇಟಿಯಾಗುವ ಸಂದರ್ಭ ಸಹ ಸಿಗಲಿ ಎಂದು ಅವರು ಬಯಸುತ್ತಾರೆ. ವಿಶ್ವದ ವಿವಿಧ ದೇಶಗಳಿಂದ ಇಲ್ಲಿಗೆ ಜನರು ಆಗಮಿಸುತ್ತಾರೆ. ಹೊಸದಾಗಿ ಜಮಾಅತ್‌ಗೆ ಸೇರಿದವರೂ ಹಳೆಯ ಅಹ್ಮದಿಯರೂ ಇವರಲ್ಲಿದ್ದಾರೆ. ಇಲ್ಲಿಗೆ ಆಗಮಿಸುವವರ ಕಣ್ಣುಗಳಲ್ಲಿ ಖಿಲಾಫತ್ ಬಗ್ಗೆ ಅವರಿಗಿರುವ ಪ್ರೀತಿ ನನಗೆ ಕಾಣಿಸುವಾಗ ಅಲ್ಲಾಹನಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಲ್ಲಾಹನು ಸತ್ಯವಿಶ್ವಾಸಿಗಳ ಹೃದಯಗಳಲ್ಲಿ ಖಿಲಾಫತ್ ಬಗ್ಗೆ ಪ್ರೀತಿಯನ್ನು ಹುಟ್ಟಿಸುತ್ತಾನೆ. ಇದು ಯಾವುದೇ ಮನುಷ್ಯನ ಪ್ರಯತ್ನದಿಂದ ಉಂಟಾಗಲಾರದು. ಈ ಪ್ರೀತಿ ಹುಟ್ಟುವಂತಾದುದು ಹೇಗೆಂದರೆ ಈ ಕಾಲಘಟ್ಟದಲ್ಲಿ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಕಳುಹಿಸಿ, ಅವರು ನಿಧನ ಹೊಂದಿದ ನಂತರ ಈ ಖಿಲಾಫತ್ ವ್ಯವಸ್ಥೆಯನ್ನು ಜಾರಿಗೊಳಿಸಿ, ಅದರ ಮೂಲಕ ಇಸ್ಲಾಮಿನ ನೈಜ ತತ್ವಗಳು ಲೋಕದ ಜನರಿಗೆ ತಿಳಿಯುವಂತೆ ಮಾಡಲು ಹೀಗೆ ಮಾಡಿರುವನು. ಇಸ್ಲಾಮಿನ ಪ್ರೀತಿಯ ಸಂದೇಶ ಲೋಕದ ಜನರಿಗೆ ತಿಳಿಸಲು ಹೀಗೆ ಮಾಡಿದನು. ನೈಜ ಇಸ್ಲಾಮ್ ತತ್ವಗಳನ್ನು ಪಾಲಿಸುವ ಮೂಲಕ ಮಾತ್ರವೇ ಲೋಕದಲ್ಲಿ ಶಾಂತಿ ಸ್ಥಾಪಿತವಾಗಲು ಸಾಧ್ಯ ಎಂದು ಲೋಕಕ್ಕೆ ತಿಳಿಸಿ ಕೊಡಲು ಅಲ್ಲಾಹನು ಹೀಗೆ ಮಾಡಿದನು. ಈ ವಿಷಯಗಳನ್ನು ತಿಳಿಯಲು, ಕಾಣಲು ಮತ್ತು ಕಲಿಯಲು ಜನರು ಇಲ್ಲಿಗೆ ಆಗಮಿಸುತ್ತಾರೆ. ಇದೇ ಕಾರಣದಿಂದ ಅವರಿಗೆ ಖಿಲಾಫತ್‌ನೊಂದಿಗೆ ಪ್ರೀತಿ ಇದೆ. ಜಲ್ಸದ ಆಧ್ಯಾತ್ಮಿಕ ವಾತಾವರಣದಿಂದ ಲಾಭಪಡೆಯಲು, ಜ್ಞಾನವನ್ನು ವರ್ಧಿಸಲು, ತರಬೇತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಜನರು ಇಲ್ಲಿಗೆ ಆಗಮಿಸುತ್ತಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದುಆಗಳ ವಾರೀಸುದಾರರಾಗಲು ಮತ್ತು ಆಯಾಕಾಲದ ಖಲೀಫರನ್ನು ಭೇಟಿಯಾಗಲು ಜನರು ಇಲ್ಲಿಗೆ ಬರುತ್ತಾರೆ. ಇಲ್ಲಿಗೆ ಆಗಮಿಸುವವರ ಭಾವನೆಗಳು ಹೇಗಿವೆ ಎಂದರೆ ಯಾವುದೇ ಲೌಕಿಕ ಸಂಬಂಧಗಳಲ್ಲಿ ಇಂತಹ ಭಾವನೆಗಳು

ಇರಲಾರವು. ಈ ಸಂಬಂಧದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬೈಅತ್‌ನ ಶರತ್ತುಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಆದುದರಿಂದ ಇಲ್ಲಿಗೆ ಆಗಮಿಸುವ ಅತಿಥಿಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ ಮತ್ತು ಅದು ಮಹತ್ವ ಪೂರ್ಣವಾಗಿದೆ. ಇದೇ ಕಾರಣದಿಂದ ಅತಿಥಿಗಳಿಗೆ ಸೇವೆಸಲ್ಲಿಸುವವರ ಮಹತ್ವ ಸಹ ವರ್ಧಿಸುತ್ತದೆ. ಈ ಮಹತ್ವವನ್ನು ಮನವರಿಕೆ ಮಾಡಿಕೊಂಡು ಜಮಾಅತಿನ ಸದಸ್ಯರು ಸ್ವಯಂ ಸೇವೆಗೋಸ್ಕರ ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ. ಲೌಕಿಕವಾಗಿ ದೊಡ್ಡ ಅಧಿಕಾರಿಗಳಾಗಿರುವವರು, ಬಹಳ ಹೆಚ್ಚು ಆದಾಯಗಳಿಸುವವರು, ಇಲ್ಲಿ ಪಾಕಶಾಲೆಯಲ್ಲಿ ಅನ್ನ ಬೇಯಿಸುವ, ರೊಟ್ಟಿ ತಯಾರಿಸುವ ಕೆಲಸಗಳಿಗೆ ಮತ್ತು ಇತರ ವಿವಿಧ ಕೆಲಸಗಳ ಮೇಲ್ವಿಚಾರಣೆಗೋಸ್ಕರವೂ ನೇಮಿಸಲ್ಪಡುತ್ತಾರೆ. ಅಂತಹ ಜನರನ್ನು ಶೌಚ್ಯಾಲಯದ ಶುಚಿತ್ವದ ಕೆಲಸಕ್ಕೆ ನೇಮಿಸಿದರೂ ಸಹ ಅವರು ಆ ಕೆಲಸವನ್ನು ಸಂತೋಷದಿಂದಲೇ ಮಾಡುತ್ತಾರೆ. ಈ ಜನರು ಅತಿಥಿ ಸೇವೆಯ ಮೂಲಕ ಅಪರಿಮಿತ ಪ್ರಾರ್ಥನೆಗಳಿಗೆ ವಾರೀಸುದಾರರಾಗುತ್ತಾರೆ. ಇಂತಹ ಕಾರ್ಯಕರ್ತರು ಅಹ್ಮದಿಯೇತರ ಅತಿಥಿಗಳಿಗೆ ತಬ್ಲೀಗ್ ಮಾಡುವ ಕಾರಣವಾಗುತ್ತಾರೆ. ಒಬ್ಬ ಬಾಲಕ ಸಹ ಜಲ್ಸದಲ್ಲಿ ಭಾಗವಹಿಸುವವರಿಗೆ ನೀರನ್ನು ಕುಡಿಯಲು ಕೊಡಲು ಸುತ್ತಾಡುತ್ತಾ ಇರುವಾಗ ಅವನು ಸಹ ಮೌನವಾಗಿ ತಬ್ಲೀಗ್ ಮಾಡುವವನಾಗುತ್ತಾನೆ. ನಾವು ಲೋಕದಲ್ಲಿ ಕಲಹ ಉಂಟುಮಾಡಲು ಬಂದವರಲ್ಲ, ನಾವು ಲೋಕದ ಜನರಿಗೆ ಲೌಕಿಕ ನೀರನ್ನು ಮಾತ್ರವಲ್ಲ ಆಧ್ಯಾತ್ಮಿಕ ನೀರನ್ನೂ ಕುಡಿಸುವವರಾಗಿದ್ದೇವೆ ಎಂದು ಅಂತಹ ಬಾಲಕ ತಿಳಿಸುತ್ತಾನೆ. ಅತಿಥಿಯ ಮಹತ್ವವು ಆತಿಥೇಯನ ಮಹತ್ವವನ್ನು ಸಹ ವರ್ಧಿಸುತ್ತದೆ. ಇದನ್ನು ಲೋಕದಲ್ಲಿ ಬೇರೆ ಎಲ್ಲಿಯೂ ಕಾಣಲು ಸಾಧ್ಯವಾಗದು. ಇಂತಹ ರೀತಿಯ ಅತಿಥಿ ಸೇವೆ ಮಾಡಲು ತಮ್ಮನ್ನು ಅರ್ಪಿಸುವ ಸ್ವಯಂಸೇವಕರೂ ಕಾರ್ಯಕರ್ತರೂ ಅದೃಷ್ಟಶಾಲಿಗಳಾಗಿದ್ದಾರೆ. ಅವರು ಅಲ್ಲಾಹನ ಸಂಪ್ರೀತಿ ಗಳಿಸುವವರಾಗಿರುತ್ತಾರೆ.

ಪವಿತ್ರ ಖುರ್‌ಆನ್‌ನಲ್ಲಿ ಸಹ ಅಲ್ಲಾಹನು ಅತಿಥಿ ಸತ್ಕಾರದ ಮಹತ್ವದ ಬಗ್ಗೆ ವಿವರಿಸಿದ್ದಾನೆ. ಹಝ್ರತ್ ಇಬ್ರಾಹಿಮ್ ಅಲೈಹಿಸ್ಸಲಾಮರ ಸ್ಥಾನಮಾನ ಮತ್ತು ಅವರ ಸತ್ಕರ್ಮಗಳನ್ನು ವಿವರಿಸುವುದರೊಂದಿಗೆ ಅವರು ಅತಿಥಿ ಸತ್ಕಾರದ ಬಗ್ಗೆ ಹೊಂದಿದ್ದ ಆಸಕ್ತಿಯನ್ನು ಸಹ ವಿಶಿಷ್ಟವಾಗಿ ವಿವರಿಸಲಾಗಿದೆ. ನಿಸ್ವಾರ್ಥರಾಗಿ ಅತಿಥಿ ಸತ್ಕಾರ ಮಾಡುವವರಿಗೆ ಅಲ್ಲಾಹನ ಸಮೀಪ ವಿಶಿಷ್ಟ ಸ್ಥಾನವಿದೆ. ಅತಿಥಿ ಸತ್ಕಾರದ ಮೂಲಕ ಅಲ್ಲಾಹನ ಸಂಪ್ರೀತಿ ಗಳಿಸಬಹುದೆಂದು ಅವರು ಭಾವಿಸುತ್ತಾರೆ. ಅಲ್ಲಾಹನ ಪ್ರೀತಿಯನ್ನು ಗಳಿಸುವುದು ಮಾತ್ರ ಅವರ ಉದ್ದೇಶವಾಗಿರುತ್ತದೆ. ಯಾವುದೇ ರೀತಿಯಲ್ಲಿ ಕೃತಜ್ಞತೆ ಗಳಿಸುವುದು ಅವರ ಉದ್ದೇಶವಾಗಿರುವುದಿಲ್ಲ.

ಒಟ್ಟಿನಲ್ಲಿ, ಅಲ್ಲಾಹನ ಪ್ರೀತಿಯನ್ನು ಗಳಿಸುವ ಉದ್ದೇಶವನ್ನು ಮಾತ್ರ ಹೊಂದಿರುವ ಇಂತಹ ಅತಿಥಿಗಳ ಉದಾಹರಣೆಗಳು ಲೋಕದಲ್ಲಿ ಬೇರೆಲ್ಲೂ ಸಿಗಲಾರವು. ಅಲ್ಲಾಹನ ಪ್ರೀತಿಯನ್ನು ಮಾತ್ರ ಗಳಿಸುವ ಉದ್ದೇಶದಿಂದ ಈ ರೀತಿ ಅತಿಥಿ ಸೇವೆ ಮಾಡುವವರ ಉದಾಹರಣೆ ಸಹ ಲಭಿಸಲಾರದು. ಈ ಸುಂದರ ದೃಶ್ಯವನ್ನು ಅಹ್ಮದಿಯಾ ಜಮಾಅತ್‌ನಲ್ಲಿ ಮಾತ್ರವೇ ಕಾಣಲು ಸಾಧ್ಯ. ಏಕೆಂದರೆ ಅಲ್ಲಾಹನ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಉಪದೇಶಗಳನ್ನು ಅನುಸರಿಸಿ ನಾವು ಈ ಕಾಲಘಟ್ಟದ ಇಮಾಮರನ್ನು ಅಂಗೀಕರಿಸಿದವರಾಗಿದ್ದೇವೆ. ನಾವು ಖಿಲಾಫತ್ ಎಂಬ ದಾರದಲ್ಲಿ ಪೋಣಿಸಲ್ಪಟ್ಟವರಾಗಿದ್ದೇವೆ. ನಾವು ಧರ್ಮಕ್ಕೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆವು ಎಂದು ಪ್ರತಿಜ್ಞೆ ಮಾಡಿದವರಾಗಿದ್ದೇವೆ. ಪ್ರತಿವರ್ಷದ ಅನುಭವದಿಂದ ನಮಗೆ ತಿಳಿಯುವುದೇನೆಂದರೆ ಪ್ರತಿಯೊಬ್ಬ ಚಿಕ್ಕವ, ದೊಡ್ಡವ, ಪುರುಷ, ಮಹಿಳೆ, ಬಾಲಕ, ಬಾಲಕಿ, ಯುವಕ, ಯುವತಿ, ವೃದ್ಧ, ಎಲ್ಲರೂ ವಿಶಿಷ್ಟ ಆಸಕ್ತಿಯಿಂದ ಸೇವೆ ಸಲ್ಲಿಸುತ್ತಾರೆ. **ಇನ್‌ಶಾಅಲ್ಲಾಹ್,** ಇದೇ ರೀತಿಯ ಉತ್ಸಾಹದಿಂದ ಈ ವರ್ಷ ಸಹ ಈ ಜನರು ಸೇವೆ ಮಾಡುವರು. ಈ ವರ್ಷದ ವಖಾರೆ ಅಮಲ್ ಬಗ್ಗೆ ನನಗೆ ವರದಿಗಳು ಬಂದಿವೆ. ಕೆಲವು ಯುವಕರು ವಕ್‌ಫೇ ಆರ್‌ಝೀ ಪ್ರಕಾರ ವಖಾರೆ ಅಮಲ್‌ನಲ್ಲಿ ಭಾಗವಹಿಸುತ್ತಿದ್ದಾರೆ. ಅವರು ಇದರ ಮೊದಲು ಈ ರೀತಿಯ ಅನುಭವ ಗಳಿಸಿದವರಲ್ಲ. ಆದುದರಿಂದ ಅವರಿಗೆ ಸರಿಯಾದ ಮಾರ್ಗದರ್ಶನ ನೀಡುವುದು ನಮಗೆ ಕಡ್ಡಾಯವಾಗಿದೆ. ಸರಿಯಾದ ಮಾರ್ಗದರ್ಶನ ನೀಡುವ ಬಗ್ಗೆ ಅಲ್ಲಾಹನು ಸಹ ನೆನಪಿಸಿ ಕೊಟ್ಟಿರುತ್ತಾನೆ ಮತ್ತು ಆಜ್ಞೆ ನೀಡಿರುತ್ತಾನೆ. ಸರಿಯಾದ ಮಾರ್ಗದರ್ಶನ ಮತ್ತು ಉಪದೇಶಗಳಿಂದ ಜನರ ಮನೋಭಾವದಲ್ಲಿ ಬದಲಾವಣೆ ಉಂಟಾಗುತ್ತದೆ. ಕೆಲವರಿಗೆ ಜಮಾಅತಿನ ವ್ಯವಸ್ಥೆ ಬಗ್ಗೆ ಸರಿಯಾದ ಅರಿವು ದೊರಕಿರುವುದಿಲ್ಲ. ಅವರಿಗೆ ಸೇವಾ ಮನೋಭಾವದ ವಾಸ್ತವಿಕತೆ ತಿಳಿಸಿಕೊಡಬೇಕಾಗಿದೆ. ಸೇವೆ ಮಾಡಲು ಬರುವವರಲ್ಲಿ ಬಹುತೇಕ ಜನರು ಇತರರನ್ನು ನೋಡಿ ತಮ್ಮನ್ನು ಸೇವೆ ಮಾಡಲು ಅರ್ಪಿಸುತ್ತಾರೆ. ಹಾಗಿದ್ದರೂ ಅವರಿಗೆ ಸೇವೆಯ ಮಹತ್ವ ತಿಳಿಸಿಕೊಡಬೇಕಾದ ಅಗತ್ಯವಿದೆ. ಅದೇರೀತಿ ಜಲ್ಸಕ್ಕೆ ಆಗಮಿಸುವ ಮಕ್ಕಳಿಗೆ ಸಹ ಜಲ್ಸಗಾಹ್‌ನಲ್ಲಿ ಸೇವೆ ಸಲ್ಲಿಸುವ ಬಗ್ಗೆ ತಿಳಿಸಿಕೊಡುವ ಆವಶ್ಯಕತೆ ಇರುತ್ತದೆ. ಅಲ್ಲಾಹನು ಹೇಳಿದ್ದಾನೆ:

**ವ ಝುಕ್ಕಿರ್ ಇನ್ನಝಿಕ್ರಾ ತನ್‌ಫಉಲ್ ಮೂಮಿನೀನ್.**

"ನೆನಪಿಸುತ್ತಾ ಇರು. ನೆನಪಿಸುತ್ತಾ ಇರುವುದು ಸತ್ಯವಿಶ್ವಾಸಿಗಳಿಗೆ ಲಾಭಕರವಾಗಿರುತ್ತದೆ."

ಅಲ್ಲಾಹನ ಯಾವುದೇ ಆಜ್ಞೆ ನಿರರ್ಥಕವಾಗಿರುವುದಿಲ್ಲ. ಡ್ಯೂಟಿ ಮಾಡುತ್ತಿರುವ ಕಾರ್ಯಕರ್ತರಲ್ಲೂ ಕಾರ್ಯಕರ್ತೆಯರಲ್ಲೂ ಅತಿಥಿಗಳ ಬಗ್ಗೆ ಎಂತಹ ಮನೋಭಾವ ಇರಬೇಕೆಂದರೆ "ಇವರು ನಮ್ಮವರೇ ಆಗಿರುವ ಪ್ರವಾಸಿಗಳು, ಇವರು ನಮ್ಮವರೇ ಆಗಿರುವ ಅತಿಥಿಗಳಾಗಿದ್ದಾರೆ. ನಾವು ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿ ಅವರಿಗೆ ಸೇವೆ ಸಲ್ಲಿಸಬೇಕು" ಎಂದು ಭಾವಿಸಬೇಕು. ಕೆಲವು ಸಾರಿ ಕೆಲವು ಅತಿಥಿಗಳಿಂದ ತಪ್ಪು ಸಂಭವಿಸುವ ಸಾಧ್ಯತೆಗಳಿವೆ. ಅಂತಹ ಸಂದರ್ಭಗಳಲ್ಲಿಯೂ ಸಹನೆಯಿಂದ ಪ್ರತಿಯೊಬ್ಬ ಕಾರ್ಯಕರ್ತ ವರ್ತಿಸಬೇಕು. ಪ್ರತಿಯೊಂದು ವಿಭಾಗದ ಕಾರ್ಯಕರ್ತ ತನ್ನ ಹೊಣೆಗಾರಿಕೆಯನ್ನು ಈಡೇರಿಸಬೇಕು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಪ್ರವಾದಿಯ ಉದಾಹರಣೆ ನೀಡಿ ಅತಿಥಿಗಳೊಂದಿಗೆ ಹೇಗೆ ವರ್ತಿಸಬೇಕೆಂದು

ಸೂಚಿಸಿದ್ದಾನೆ. ಅತಿಥಿಗಳು ಸಲಾಂ ಹೇಳುವಾಗ ಅವರಿಗೆ ಅದಕ್ಕಿಂತಲೂ ಉತ್ತಮ ರೀತಿಯಲ್ಲಿ ಮರು ಸಲಾಂ ಹೇಳಬೇಕಾಗಿದೆ. ಅತಿಥಿಗಳಿಗೆ ನೆಮ್ಮದಿ ಮತ್ತು ಸಂರಕ್ಷಣೆ ನೀಡಬೇಕು. ಅವರೊಂದಿಗೆ ಸಂತೋಷದಿಂದ ವರ್ತಿಸಬೇಕು. ಸಂತೋಷ ಲಭಿಸಿದಾಗ ಮಾತ್ರ ವಾಸ್ತವಿಕ ನೆಮ್ಮದಿ ಸಿಗುತ್ತದೆ.

ಒಟ್ಟಿನಲ್ಲಿ, ನಾವು ಅತಿಥಿಗಳಿಗೆ ಸೇವೆ ಸಲ್ಲಿಸಬೇಕೆಂಬ ಸಂಗತಿ ಯಾವಾಗಲೂ ಗಮನದಲ್ಲಿಟ್ಟುಕೊಳ್ಳಬೇಕು. ನಾವು ಅತಿಥಿಗಳಿಗೆ ಸಲ್ಲಿಸುವ ಸೇವೆಯು ನಮಗೆ ವಾಸ್ತವಿಕವಾಗಿ ಸಂತೋಷ ನೀಡುವಂತಿರಬೇಕು. ನಮ್ಮ ಹತ್ತಿರದ ಸಂಬಂಧಿಕರನ್ನು ಕಂಡಾಗ ನಮಗೆ ಸಂತೋಷ ಉಂಟಾಗುವ ರೀತಿಯಲ್ಲಿಯೇ ಜಲ್ಸಕ್ಕೆ ಆಗಮಿಸುವ ಪ್ರತಿಯೊಬ್ಬ ಅತಿಥಿಯ ಮೂಲಕ ನಮಗೆ ಸಂತೋಷ ಉಂಟಾಗಬೇಕು. ಈರೀತಿಯ ಸಂತೋಷ ಲಭಿಸಿದರೆ ಮಾತ್ರವೇ ಸೇವೆಯ ಕರ್ತವ್ಯ ಸರಿಯಾಗಿ ನಿಭಾಯಿಸಲ್ಪಡುವುದು. ನಾವು ಅತಿಥಿ ಸತ್ಕಾರದ ಎಂತಹ ಮಟ್ಟವನ್ನು ಸ್ಥಾಪಿಸುವ ಆವಶ್ಯಕತೆ ಇದೆ ಎಂದರೆ ನಮ್ಮ ಎಲ್ಲಾ ಸಾಮರ್ಥ್ಯಗಳ ಪ್ರಕಾರ ಮತ್ತು ನಮ್ಮ ಸ್ಥಿತಿಗೆ ಅನುಸಾರವಾಗಿ ಅತ್ಯಂತ ಉತ್ತಮ ರೀತಿಯಲ್ಲಿ ಅತಿಥಿ ಸತ್ಕಾರ ಮಾಡುವವರಾಗಬೇಕು. ಜಲ್ಸದ ವ್ಯವಸ್ಥಾಪಕರು ಇದರ ಬಗ್ಗೆ ಯಾವಾಗಲೂ ಯೋಚಿಸುತ್ತಾ ಇರಬೇಕು.

ಅಲ್ಲಾಹನು ನಮ್ಮಿಂದ ಬಯಸುವುದೇನೆಂದರೆ ಅತ್ಯುತ್ತಮವಾಗಿ ಅತಿಥಿಗಳನ್ನು ಸತ್ಕರಿಸಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅಲ್ಲಾಹನ ಆಜ್ಞೆಗಳನ್ನು ಚೆನ್ನಾಗಿ ಮನವರಿಕೆ ಮಾಡಿ ಕೊಳ್ಳುವವರೂ ಅದನ್ನು ಅನುಷ್ಠಾನಕ್ಕೆ ತರುವವರೂ ಆಗಿದ್ದರು. ಅವರು ಹೇಳಿದ್ದರು: "ಅತಿಥಿಗಳಿಗೆ ನಿಮ್ಮ ಮೇಲೆ ಕೆಲವು ಹಕ್ಕುಗಳು ಇವೆ. ನೀವು ಅವುಗಳನ್ನು ಈಡೇರಿಸಿರಿ."

ಒಮ್ಮೆ ಹೆಚ್ಚಿನ ಸಂಖ್ಯೆಯಲ್ಲಿ ಅತಿಥಿಗಳು ಆಗಮಿಸಿದಾಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ಅತಿಥಿಗಳನ್ನು ಶಿಷ್ಯರಿಗೆ ಹಂಚಿದರು. ತನ್ನ ಪಾಲಿಗೆ ಸಹ ಅತಿಥಿಯನ್ನು ಪಡೆದರು. ಮನೆಗೆ ಅತಿಥಿಯನ್ನು ಕರೆದುಕೊಂಡು ಹೋದಾಗ ಅವರ ಪತ್ನಿ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಹೇಳಿದರು: ಸ್ವಲ್ಪ ಮಾತ್ರ ಆಹಾರ ಇದೆ ಎಂದು. ಅದರಲ್ಲಿ ಸ್ವಲ್ಪವನ್ನು ರುಚಿಸಿ ಉಳಿದುದನ್ನು ಅತಿಥಿಗೆ ತಿನ್ನಲು ಕೊಟ್ಟರು. ಆ ಆಹಾರದಿಂದ ಅತಿಥಿಯ ಹೊಟ್ಟೆ ಸಹ ತುಂಬಿತು ಎಂದು ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ವರದಿ ಮಾಡುತ್ತಾರೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರು ತನ್ನ ಸಹಾಬರಿಗೆ(ಶಿಷ್ಯರಿಗೆ) ಸಹ ತರಬೇತಿ ನೀಡಿದುದರಿಂದ ಅವರು ಸಹ ನಿಸ್ವಾರ್ಥರಾಗಿ ಅತಿಥಿ ಸತ್ಕಾರ ಮಾಡುವವರಾಗಿದ್ದರು. ಅವರು ಮಾಡಿದ ಅತಿಥಿ ಸತ್ಕಾರದ ಬಗ್ಗೆ ಆಶ್ಚರ್ಯಕರ ಉದಾಹರಣೆಗಳು ಲಭಿಸುತ್ತವೆ. ಒಬ್ಬ ಆತಿಥೇಯ ಮಾಡಿದ ಅತಿಥಿ ಸತ್ಕಾರದಿಂದ ಅಲ್ಲಾಹನೂ ಸಂತೋಷಗೊಂಡು ಆ ವಿಷಯ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರಿಗೆ ತಿಳಿಸಿದನು. ಇದರ ಬಗ್ಗೆ ಒಂದು ಹದೀಸು ಹೀಗಿದೆ:

ಹಝ್ರತ್ ಅಬೂ ಹುರೈರ ವರದಿ ಮಾಡುತ್ತಾರೆ: ಒಬ್ಬ ಅತಿಥಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಬಳಿಗೆ ಬಂದಾಗ ಅತಿಥಿಗೋಸ್ಕರ ಆಹಾರವನ್ನು ಕಳುಹಿಸಲು ಮನೆಗೆ ಹೇಳಿ ಕಳುಹಿಸಿದಾಗ ಹೀಗೆ ಉತ್ತರ ಲಭಿಸಿತು. "ನೀರಿನ ಹೊರತು ಬೇರೇನೂ ಈಗ ಮನೆಯಲ್ಲಿ ಇಲ್ಲ" ಈ ಅತಿಥಿಗೆ ಯಾರು ಆಹಾರ ನೀಡುವರು ಎಂದು ವಿಚಾರಿಸಿದಾಗ ಒಬ್ಬ ಅನ್‌ಸಾರ್ (ಮದೀನದ ನಿವಾಸಿ) ಹೇಳಿದರು: ನಾನು ಆ ಅತಿಥಿಯನ್ನು ಸತ್ಕರಿಸುವೆನು. ಮನೆಗೆ ಆ ಅತಿಥಿಯನ್ನು ಕರೆದುಕೊಂಡು ಹೋಗಿ ಆ ಅನ್‌ಸಾರ್ ಸಹೋದರ ಪತ್ನಿಗೆ ಹೇಳಿದರು– ಈ ಅತಿಥಿಗೆ ಆಹಾರದ ವ್ಯವಸ್ಥೆ ಮಾಡು. ಆಗ ಪತ್ನಿ ಹೇಳಿದರು ಈಗ ಮಕ್ಕಳಿಗೆ ಕೊಡಲು ಮಾತ್ರ ಆಹಾರವಿದೆ; ನಮಗೆ ಸಹ ಆಹಾರ ಇಲ್ಲ ಎಂದು. ಆಗ ಪತ್ನಿಯೊಂದಿಗೆ ಆ ಅನ್‌ಸಾರ್ ಸಹೋದರ ಹೀಗೆ ಹೇಳಿದರು: ನೀನು ಆಹಾರ ಸಿದ್ಧಪಡಿಸಿ ದೀಪ ಹಚ್ಚಿ ಮಕ್ಕಳನ್ನು ಹೇಗಾದರೂ ಮಲಗಿಸು. ಆ ಬಳಿಕ ಆಹಾರ ಸಿದ್ಧ ಪಡಿಸಿದ ನಂತರ ದೀಪವನ್ನು ಸರಿಪಡಿಸುವ ನೆವನದಲ್ಲಿ ಅದನ್ನು ನಂದಿಸಲಾಯಿತು. ಅತಿಥಿಯ ಮುಂದೆ ಆಹಾರ ಇರಿಸಿ ಪತಿ ಪತ್ನಿಯರು ಆಹಾರ ತಿನ್ನುವ ಹಾಗೆ ನಟಿಸಿದರು. ಅತಿಥಿ ಹೊಟ್ಟೆ ತುಂಬಾ ಉಂಡರು. ಪತಿ ಪತ್ನಿ ಮತ್ತು ಮಕ್ಕಳು ಖಾಲಿ ಹೊಟ್ಟೆಯಲ್ಲೇ ರಾತ್ರಿ ಕಳೆದರು.

ಆ ಅನ್‌ಸಾರ್ ಸಹೋದರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಮರುದಿನ ಬೆಳಗ್ಗೆ ಕಂಡಾಗ ಅವರು ಹೇಳಿದರು: "ನೀವು ಮಾಡಿದ ಉಪಾಯದಿಂದ ಅಲ್ಲಾಹನು ಸಹ ಮುಗುಳು ನಗೆ ಬೀರಿದನು. ಅವನು ನಿಮ್ಮಿಬ್ಬರ ವರ್ತನೆಯಿಂದ ಸಂಪ್ರೀತನಾಗಿರುವನು" ಎಂದು.

ಆ ಸಂದರ್ಭದಲ್ಲಿ ಪವಿತ್ರ ಖುರ್‌ಆನಿನ ಒಂದು ವಚನ ಸಹ ಅವತೀರ್ಣಗೊಂಡಿತು. ಅದು ಹೀಗಿದೆ: **ವ ಯೂಸಿದೂನ ಅಲಾ ಅನ್‌ಫುಸಿಹಿಮ್ ವ ಲೌಕಾನ ಬಿಹಿಮ್ ಖಸಾಸತುನ್ ವಮನ್ ಯೂಖ ಶುಹ್ಹ ನಫ್‌ಸಿಹೀ ಫ ಉಲಾಇಕ ಹುಮುಲ್ ಮುಫ್‌ಲಿಹೂನ್.** "ಪರಿಶುದ್ಧ ಅಂತರಂಗವನ್ನು ಹೊಂದಿದ ತ್ಯಾಗಿಗಳಾದ ಈ ಜನರು ನಿಷ್ಠಾವಂತರಾದ ಸತ್ಯ ವಿಶ್ವಾಸಿಗಳಾಗಿದ್ದಾರೆ. ಅವರು ಅನ್ಯರಿಗೆ ತಮ್ಮ ಮೇಲೆ ಆದ್ಯತೆ ನೀಡುತ್ತಾರೆ– ಅವರು ಸ್ವತಃ ಆವಶ್ಯಕತೆ ಇರುವವರಾಗಿದ್ದು ಕೂಡ. ಯಾರು ತಮ್ಮ ಆತ್ಮದ ಜಿಪುಣತೆಯಿಂದ ರಕ್ಷಿಸಲ್ಪಟ್ಟಿರುವರೋ ಅವರೇ ಜಯಶಾಲಿಗಳಾಗುವರು."

ಈಗ ಇಲ್ಲಿಗೆ ಆಗಮಿಸುವವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರ ನಿಜವಾದ ಪ್ರೇಮಿಯ ಅತಿಥಿಗಳಾಗಿದ್ದಾರೆ ಎಂಬ ವಿಷಯವನ್ನು ನಾವು ನಮ್ಮ ಮುಂದಿರಿಸಬೇಕಾಗಿದೆ. ಅವರು ಧಾರ್ಮಿಕ ಉದ್ದೇಶದಿಂದ ಪ್ರಯಾಣ ಮಾಡಿ ಆಗಮಿಸುವವರಾಗಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳನ್ನು ಸತ್ಕರಿಸಲು ನೇಮಿಸಲ್ಪಟ್ಟ ಪುರುಷರೂ ಮಹಿಳೆಯರೂ ಮಕ್ಕಳೂ ಆಗಿರುವ ನೀವು ಅದೃಷ್ಟಶಾಲಿಗಳಾಗಿರುವಿರಿ. ಈ ಕಾಲಘಟ್ಟದಲ್ಲಿ ನಮಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಯಜಮಾನರಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮರನ್ನು ಅನುಸರಿಸಿ ಎಂತಹ ಉತ್ತಮ ಮಾದರಿಯನ್ನು ತೋರಿಸಿ ಕೊಟ್ಟಿರುವರೆಂದರೆ, ಅವರು ಅತಿಥಿಗಳನ್ನು ಸತ್ಕರಿಸಲು ತಮ್ಮ ವಿರಾಮಕಾಲವನ್ನೂ ತ್ಯಾಗ ಮಾಡಿದರು. ಚಳಿಗಾಲದಲ್ಲಿ ತನ್ನ ರಝಾಯೀಯನ್ನು ಅತಿಥಿಗೆ ಕೊಟ್ಟು ತಾವು ಸ್ವತಃ ರಝಾಯೀ ಇಲ್ಲದೆ ರಾತ್ರಿಯನ್ನು ಕಳೆದರು. ಅತಿಥಿಗಳಿಗೆ ಆಹಾರದ ವ್ಯವಸ್ಥೆ ಮಾಡಲು ಹಝ್ರತ್ ಅಮ್ಮಾಜಾನ್ ರಝಿಯಲ್ಲಾಹು ಅನ್‌ಹಾರವರ ಆಭರಣಗಳನ್ನು ವಿಕ್ರಯಿಸಿ ಹಣ ಒದಗಿಸಿದರು. ಇಂತಹದೇ ಉದಾಹರಣೆಗಳನ್ನು ಅವರ ಶಿಷ್ಯರೂ ಸಹ ನಮಗೆ ತೋರಿಸಿ ಕೊಟ್ಟರು. ಅವರು ತಮ್ಮ ಸುಖಕ್ಕಿಂತ ಅನ್ಯರಿಗೆ ಸುಖ ನೀಡಲು ಆದ್ಯತೆ ನೀಡುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ್ದಾರೆ: "ನಿಮ್ಮ ಸ್ವಂತ ಆವಶ್ಯಕತೆಗಳಿಗೆ ಅನ್ಯರ ಆವಶ್ಯಕತೆಗಳ ಮೇಲೆ ಆದ್ಯತೆ ನೀಡಬೇಡಿರಿ. ನೀವು ತ್ಯಾಗಕ್ಕೆ ಸಿದ್ಧರಾಗಿರಿ" ಎಂದು. ಆದುದರಿಂದ ಯಾವುದಾದರೂ ಸಂದರ್ಭದಲ್ಲಿ ಆಹಾರದ ಕೊರತೆಯುಂಟಾದರೆ ನಮ್ಮ ಕಾರ್ಯಕರ್ತರು ಗಾಬರಿಗೊಳ್ಳಬಾರದು. ಅವರು ಅತಿಥಿಗಳಿಗೋಸ್ಕರ ತ್ಯಾಗವನ್ನು ಸಹಿಸಲು ಸಿದ್ಧರಾಗಬೇಕು.

ಹಝ್ರತ್ ಯಅ್‌ಖೂಬ್ ಅಲಿ ಸಾಹೇಬ್ ಇರ್‌ಫಾನೀ ಹೀಗೆ ಬರೆಯುತ್ತಾರೆ:

ಜಂಗೇ ಮುಖದ್ದಸ್ ಎಂಬ ವಾದವಿವಾದ ನಡೆಯುತ್ತಿದ್ದಾಗ ಅನೇಕ ಅತಿಥಿಗಳು ಆಗಮಿಸುತ್ತಿದ್ದರು. ಒಂದು ದಿನ ರಾತ್ರಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಆಹಾರ ಸಿದ್ಧಪಡಿಸಿಡಲು ಮರೆತು ಹೋಗಿತ್ತು. ರಾತ್ರಿ ಬಹಳ ಹೊತ್ತಿನ ತನಕ ತನಗೆ ಆಹಾರ ತರದುದನ್ನು ಕಂಡಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅದರ ಬಗ್ಗೆ ವಿಚಾರಿಸಿದರು. ಆಗ ಮನೆಯಲ್ಲಿ ಆಹಾರವಿರಲಿಲ್ಲ. ಆಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು ಗಾಬರಿ ಪಡಬೇಕಾದ ಅಗತ್ಯವಿಲ್ಲ. ಏನಾದರೂ ಬಾಕಿಯಾಗಿ ಉಳಿದಿದ್ದರೆ ಅದೇ ಸಾಕು. ಆಗ ಅಡುಗೆ ಮನೆಯಲ್ಲಿ ರೊಟ್ಟಿಗಳ ಕೆಲವು ತುಂಡುಗಳು ಮಾತ್ರ ಲಭಿಸಿದುವು. ಅವುಗಳಿಂದ ಒಂದೆರಡು ತುಂಡುಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಿಂದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ವರ್ತನೆ ಅತ್ಯಂತ ಅದ್ಭುತಕರವಾಗಿತ್ತು. ಆಗ ಆಹಾರ ಸಿದ್ಧಪಡಿಸಲು ಸಾಧ್ಯವಿದ್ದರೂ ಅದಕ್ಕೆ ಆವಶ್ಯಪಡದೆ ಅವರು ತಮಗೆ ದೊರಕಿದುದರಲ್ಲಿ ತೃಪ್ತರಾದರು. ಅಸಮಯದಲ್ಲಿ ಮನೆಯ ಹೆಂಗಸರಿಗೆ ಕಷ್ಟ ಕೊಡಲು ಅವರು ಬಯಸಲಿಲ್ಲ. ತನಗೆ ಆಹಾರ ತೆಗೆದಿಡದರ ಬಗ್ಗೆ ಆಕ್ಷೇಪಿಸಲೂ ಇಲ್ಲ. ಅವರು ಸಮಾಧಾನ ಚಿತ್ತರಾಗಿ ಅನ್ಯರ ಗಾಬರಿಯನ್ನು ಹೋಗಲಾಡಿಸಿದರು.

ಯಾವಾಗಲಾದರೂ ಇಂತಹ ಸಂದರ್ಭ ತಲೆದೋರಿದರೆ ಈ ವಿಚಾರವನ್ನು ಯಾವಾಗಲೂ ನೆನಪಿನಲ್ಲಿ ಇಡಬೇಕು. ನಮ್ಮ ಕಾರ್ಯಕರ್ತರಲ್ಲಿ ಬಹುತೇಕ ಜನರು ಉತ್ತಮ ಸ್ವಭಾವ ಗುಣಗಳನ್ನು ಹೊಂದಿದವರಾಗಿದ್ದಾರೆ. ಅವರು ಇಂತಹ ಸಂದರ್ಭಗಳಲ್ಲಿ ಗಾಬರಿಗೊಳ್ಳಲಾರರು. ಆದರೆ ಕೆಲವು ಸಂದರ್ಭಗಳಲ್ಲಿ ಕೆಲವರು ದೂರು ನೀಡುತ್ತಾರೆ. ಅವರು ಸಹ ಈ ವಿಷಯ ಗಮನಿಸಬೇಕು. ಜಲ್ಸದ ಅಧಿಕಾರಿಗಳು ತಮ್ಮ ಕಾರ್ಯಕರ್ತರಿಗೋಸ್ಕರ ತಕ್ಕುದಾದ ವ್ಯವಸ್ಥೆ ಮಾಡಿರಬೇಕು. ಡ್ಯೂಟಿ ಮುಗಿಸಿದ ಕಾರ್ಯಕರ್ತರಿಗೆ ಊಟದ ವ್ಯವಸ್ಥೆ ಮುಂದಾಗಿ ಮಾಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

"ಅತಿಥಿಗೆ ಯಾವುದೇ ಕಷ್ಟ ಉಂಟಾಗಬಾರದು ಎನ್ನುವುದರ ಬಗ್ಗೆ ನಾನು ಯಾವಾಗಲೂ ಗಮನಿಸುತ್ತೇನೆ. ಅತಿಥಿಗೆ ಸಾಧ್ಯವಿರುವಷ್ಟು ಮಟ್ಟಿಗೆ ಸೌಲಭ್ಯಗಳನ್ನು ನೀಡಬೇಕೆಂದು ನಾನು ಯಾವಾಗಲೂ ಒತ್ತಿ ಹೇಳುತ್ತೇನೆ. ಅತಿಥಿಯ ಹೃದಯ ಕನ್ನಡಿಯ ಹಾಗೆ ನಾಜೂಕು ಆಗಿರುತ್ತದೆ. ಸ್ವಲ್ಪ ಮಾತ್ರ ಏಟು ತಗಲಿದರೂ ಅದು ಒಡೆದು ಹೋಗುತ್ತದೆ. ನಾನು ಅತಿಥಿಗಳ ಜೊತೆ ಕುಳಿತು ಆಹಾರ ತಿನ್ನುತ್ತಿದ್ದೆನು. ಆದರೆ ನನ್ನ ಕಾಯಿಲೆ ವರ್ಧಿಸಿದಾಗ ಪಥ್ಯ ಮಾಡಬೇಕಾದುದರಿಂದ ಈ ವ್ಯವಸ್ಥೆ ಮುಂದುವರಿಯಲಿಲ್ಲ. ಅತಿಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಸ್ಥಳವೂ ಸಾಕಾಗುವುದಿಲ್ಲ. ಅತಿಥಿಗಳು ತಮ್ಮ ಆವಶ್ಯಕತೆಗಳನ್ನು ನಿಸ್ಸಂಕೋಚವಾಗಿ ನಮ್ಮೊಡನೆ ಹೇಳಬಹುದು. ಕೆಲವರು ರೋಗಿಗಳಾಗಿರಬಹುದು. ಅಂತಹವರಿಗೆ ಬೇರೆಯೇ ವ್ಯವಸ್ಥೆ ಮಾಡಬಹುದಾಗಿದೆ."

ಯಾವಾಗಲೂ ನೆನಪಿಡಬೇಕಾದುದೇನೆಂದರೆ ಅತಿಥಿಗೆ ಯಾವುದೇ ರೀತಿ ನೋವುಂಟಾಗುವಂತೆ ಕಾರ್ಯಕರ್ತರು ವರ್ತಿಸಬಾರದು. ಉನ್ನತ ಮಟ್ಟದ ಸ್ವಭಾವಗುಣಗಳನ್ನು ಪ್ರಕಟಿಸುವುದು ಕಾರ್ಯಕರ್ತರಿಗೆ ಕಡ್ಡಾಯವಾಗಿದೆ. ಯಾರಾದರೂ ದೂರಿದರೆ ಅವರಿಗೆ ಒರಟು ಉತ್ತರ ನೀಡಬಾರದು. ಅತಿಥಿಯ ಕಷ್ಟ ದೂರಸರಿಸಲು ಪ್ರಯತ್ನ ಮಾಡಬೇಕು.

ಕೊನೆಯದಾಗಿ ನಾನು ಹೇಳಲು ಬಯಸುವುದೇನೆಂದರೆ ವಿವಿಧ ವಿಭಾಗಗಳಲ್ಲಿ ಈಗ ಕಾರ್ಯಕರ್ತರಿಗೆ ಸಾಕಷ್ಟು ತರಬೇತಿ ನೀಡಲಾಗಿದೆ. ಅವರಿಗೆ ತಮ್ಮ ಕೆಲಸವೇನೆಂದು ಚೆನ್ನಾಗಿ ತಿಳಿದಿದೆ. ಆದರೆ ವ್ಯವಸ್ಥೆಯ ಮೇಲೆ ಆವಶ್ಯಕ್ಕಿಂತ ಹೆಚ್ಚು ಭರವಸೆ ಹೊಂದಬಾರದು. ಪ್ರತಿಯೊಂದು ವಿಷಯದ ಬಗ್ಗೆ ಸೂಕ್ಷ್ಮವಾಗಿ ಪರಿಶೀಲಿಸುತ್ತಾ ಇರಬೇಕು. ಉದಾಸೀನರಾಗಬಾರದು.

ಇನ್ನೊಂದು ಮುಖ್ಯ ವಿಷಯ ಸೆಕ್ಯುರಿಟಿ ವ್ಯವಸ್ಥೆಯದ್ದಾಗಿದೆ. ಆ ಬಗ್ಗೆ ಅತ್ಯಂತ ಜಾಗರೂಕತೆ ಹೊಂದಿರಬೇಕು. ಜಮಾಅತ್ ಲೋಕದಲ್ಲಿ ಪ್ರಸಿದ್ಧಿಯನ್ನು ಗಳಿಸುತ್ತಾ ಇರುವಾಗ ಮತ್ತು ಅದು ಅಭಿವೃದ್ಧಿಯ ಕಡೆಗೆ ಹೆಜ್ಜೆ ಹಾಕುತ್ತಾ ಇರುವಾಗ ಅಸೂಯೆಗಾರರ ಮತ್ತು ಶತ್ರುಗಳ ಸಂಖ್ಯೆ ಸಹ ವರ್ಧಿಸುತ್ತಾ ಇರುತ್ತದೆ. ಜಮಾಅತಿನ ವಿರುದ್ಧ ಷಡ್ಯಂತರಗಳನ್ನು ಹೂಡುವ ಅವರ ಪ್ರಯತ್ನಗಳು ಹೆಚ್ಚಾಗುತ್ತಾ ಇರುತ್ತವೆ. ಆದುದರಿಂದ ಸೆಕ್ಯುರಿಟಿ ವಿಭಾಗ ಅತ್ಯಂತ ಕಾರ್ಯಕ್ಷಮತೆ ಹೊಂದಬೇಕಾದುದು ಆವಶ್ಯಕವಾಗಿದೆ. ಆದರೆ ಸೆಕ್ಯುರಿಟಿ ಚೆಕ್ಕಿಂಗ್ ಮಾಡುವಾಗ ಉತ್ತಮ ಸ್ವಭಾವಗುಣಗಳನ್ನು ಕೈಬಿಡಬಾರದು. ಚೆಕ್ಕಿಂಗ್ ಪೊಯಿಂಟ್‌ಗಳಲ್ಲಿ ಕೆಲಸ ಮಾಡುವ ಕಾರ್ಯಕರ್ತರು ಉತ್ತಮ ಸ್ವಭಾವಗುಣಗಳನ್ನು ಪ್ರಕಟಿಸುವವರಾಗಬೇಕು. ಪ್ರತಿಯೊಂದು ಸ್ಥಳದಲ್ಲಿ ಕೇವಲ ಮಕ್ಕಳನ್ನೂ ತರುಣರನ್ನೂ ಮಾತ್ರ ನಿಲ್ಲಿಸಬಾರದು. ಹಿರಿಯರೂ ತಿಳುವಳಿಕೆಯುಳ್ಳವರೂ ಆಗಿರುವವರು ಸಹ ಪ್ರತಿಯೊಂದು ಚೆಕ್ಕಿಂಗ್ ಪೊಯಿಂಟ್‌ನಲ್ಲಿರಬೇಕು.

ಎಲ್ಲದಕ್ಕಿಂತಲೂ ಮಿಗಿಲಾಗಿ ಈ ಕೆಲಸಕ್ಕೆ ನಿಯುಕ್ತರಾದವರು ತಮ್ಮ ಕೆಲಸ ಉತ್ತಮವಾಗಿ ನಿರ್ವಹಿಸುವಂತಾಗಲು ದುಆ ಮಾಡುತ್ತಿರಬೇಕು. ನಮ್ಮ ಎಲ್ಲಾ ಕೆಲಸಗಳು ಯಾರದಾದರೂ ಸಾಮರ್ಥ್ಯದ ಕಾರಣದಿಂದಾಗಲಿ ಅಥವಾ ಪ್ರಯತ್ನದ ಕಾರಣದಿಂದಾಗಲಿ ಆಗುವಂತಹದ್ದಲ್ಲ, ಅಲ್ಲಾಹನ ಸಹಾಯದಿಂದ ಮಾತ್ರ ಈಡೇರುತ್ತವೆ. ಅಲ್ಲಾಹನ ಅನುಗ್ರಹ ಮತ್ತು ಸಹಾಯಗಳನ್ನು ಗಳಿಸಲು ಪ್ರಾರ್ಥನೆ ಮಾಡುವುದು ಅತ್ಯಾವಶ್ಯಕವಾಗಿದೆ. ಇದನ್ನು ನಾವು ಎಂದೂ ಮರೆತು ಬಿಡಬಾರದು. ಕಾರ್ಯಕರ್ತರು ಮಾತ್ರವಲ್ಲ ನಾವೆಲ್ಲರೂ ಪ್ರಾರ್ಥಿಸಬೇಕು. ಜಲ್ಸದ ಎಲ್ಲಾ ವ್ಯವಸ್ಥೆಗಳನ್ನು ಸರಿಯಾದ ಸಮಯದಲ್ಲಿ ಅಲ್ಲಾಹನು ಪರಿಪೂರ್ಣಗೊಳ್ಳುವಂತೆ ಮಾಡಲಿ ಮತ್ತು ಅತಿಥಿಗಳಿಗೆ ಎಲ್ಲಾ ರೀತಿಗಳಲ್ಲಿ ಅನುಕೂಲತೆಗಳನ್ನು ಒದಗಿಸುವಂತೆ ಮಾಡಲಿ – ಆಮೀನ್.

–––––––––––––––*****––––––––––––––

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 22-08-2014.*

Summarized by *Nazarath Nashr-O-Isha'ath, Qadian*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team,** *Ahmadiyya Muslim Jama`at, Karnataka*

*Email*: **khutuba.kannada@gmail.com**